ಮಾಂತ್ರಿಕ ಗಳಿಗೆಗಳು ಈ ಕೃತಿಯನ್ನು ಹಿಗ್ಗಿಸುತ್ತಾ ಹೋಗುತ್ತವೆ.

ಮಣಿಬಾಲೆಯ ಅಜ್ಜಿ ಫ್ಯೂಡಲ್ ವ್ಯವಸ್ಥೆಯ ಹಿನ್ನೆಲೆಯಿಂದ ಬಂದವಳಾದರೂ ಅವಳ ಬದುಕು, ತನ್ನ ಬಗೆಗೆ ಅವಳಿಗಿರುವ ಅತುಲ ಆತ್ಮವಿಶ್ವಾಸ, ಹೆಣ್ಣಿನ ಮೂಲಗುಣವೇ ಆಗಿರುವ ಅಂತಃಕರಣ ಎಲ್ಲವೂ ಸೇರಿ ಅವಳು ಇತಿಹಾಸಕಾರ್ತಿಯೂ ಸಮಾಜವಿಜ್ಞಾನಿಯೂ ಲೋಕಜ್ಞಾನಿಯೂ ಆಗಿ ಮಣಿಬಾಲೆಗೆ 'ಹೆಣ್ಣಿನ ದಾರಿ'ಗಳನ್ನು ಪರಿಚಯಿಸುತ್ತಾ ಹೋಗುತ್ತಾಳೆ. ಗಂಡು ಹೆಣ್ಣಿನ ಸಂಬಂಧದ ವಿಷಮತೆಗಳು, ದುರಂತಗಳು, ಗಂಡು ಹೆಣ್ಣನ್ನು ಹುರಿದು ಮುಕ್ಕಲು ಹುಡುಕುವ ನೂರಾರು ದಾರಿಗಳು ಇವುಗಳನ್ನು ಅಜ್ಜಿಯ ಕಣ್ಣಿನಿಂದ ನೋಡುತ್ತಲೇ ಮಣಿಬಾಲೆ ಬಾಲೆತನವನ್ನು ಉಳಿಸಿಕೊಂಡೂ ಅಜ್ಜಿಯ ಪ್ರಬುದ್ಧತೆಯನ್ನೂ ಪಡೆಯುತ್ತಾ ಹೋಗುತ್ತಾಳೆ. ಸರಿತಪ್ಪುಗಳ ತಕ್ಕಡಿಯಲ್ಲಿ ತೂಗಲಾಗದ ಸನ್ನಿವೇಶಗಳಲ್ಲಿ ಹೆಣ್ಣನ್ನು ಮಾತ್ರ ಅನಾಯಾಸವಾಗಿ ಸಮುದಾಯ ತಪ್ಪಿತಸ್ಥಳ ಜಾಗದಲ್ಲಿ ಕೂರಿಸುವುದನ್ನು ಬದುಕಿನುದ್ದಕ್ಕೂ ಕಂಡರೂ ಅಜ್ಜಿಗೆ ಬದುಕಿನ ಮೇಲಾಗಲೀ, ಹೆಣ್ಣುಜನ್ಮದ ಬಗೆಗಾಗಲೀ ಕಿಂಚಿತ್ತೂ ಬೇಸರವಿಲ್ಲ, ಸಿನಿಕತನವಿಲ್ಲ.

ಈ ಅಂಶದಿಂದಲೇ ಈ ಕೃತಿಯ ನಿಜವಾದ ಶಕ್ತಿಯ ಅರಿವು ಓದುಗರಿಗಾಗುತ್ತದೆ. ಹೆಣ್ಣಿನ ವಿಶ್ವಾಸದ ಮೂಲ, ತನ್ನ ಪಾತ್ರದ ಅನಿವಾರ್ಯತೆ, ಮಹತ್ವವನ್ನು ತನಗೆ ತಾನೇ ಅರಿತಿರುವುದರಲ್ಲಿದೆ. ಕಾದಂಬರಿಯಲ್ಲಿ ಅಡುಗೆಮನೆ, ಅಡುಗೆ, ಹಬ್ಬ ಹರಿದಿನಗಳು, ಮದುವೆ ಮುಂಜಿಗಳು, ನಾಯಕ ನಾಯಕಿಯರ ಪಾತ್ರ ವಹಿಸುತ್ತಾ ಹೋಗುತ್ತವೆ. ಗಂಡಿನ ಹೊರಲೋಕ, ಅವನ ಕೃಷಿ, ದುಡಿಮೆ , ಅಧಿಕಾರ ಇವೆಲ್ಲದರಷ್ಟೇ ಅಥವಾ ಇವುಗಳಿಗಿಂತಲೂ ಮೂಲಭೂತವಾಗಿ ಅಡುಗೆಮನೆಯಿದೆ ಎನ್ನುವ ಸತ್ಯದ ವಕ್ತಾರರಾಗಿ, ಪ್ರತಿನಿಧಿಗಳೂ ಪ್ರತಿಪಾದಕರೂ ಆಗಿದ್ದಾರೆ – ಈ ಕೃತಿಯ ಸ್ತ್ರೀ ಪಾತ್ರಗಳು.

ಗಂಡು, ಗಂಡಾಳಿಕೆ ಅಧಿಕೃತವಾಗಿ ಒಪ್ಪದಿದ್ದರೂ ಹೆಣ್ಣು ಮನೆಯ ಕೇಂದ್ರ ಎನ್ನುವ ಅರಿವು ಈ ಹೆಣ್ಣುಮಕ್ಕಳಲ್ಲಿ ತುಂಬುವ ಆತ್ಮವಿಶ್ವಾಸ ಅಗಾಧವಾದುದು. ತಮ್ಮ ಕಾರ್ಯ ನಿರ್ವಹಣೆ ಮತ್ತು ಮೌನದಲ್ಲೇ ಇಲ್ಲಿನ ಹೆಣ್ಣುಮಕ್ಕಳು ಸ್ತ್ರೀಲೋಕವೊಂದನ್ನು ಅದ್ಭುತವಾಗಿ ಕಟ್ಟುತ್ತಾ ಹೋಗುತ್ತಾರೆ. ಮೂರ್ತ ಕದನವಿಲ್ಲದೆಯೇ ಕದನವೊಂದನ್ನು ಇವರು ಕಾದಿ ಗೆಲ್ಲುವ ಕಡೆಗೆ ಚಲಿಸುತ್ತಾ ಹೋಗುತ್ತಾರೆ. ಹಾಗೆಂದು ಇದು ಹೆಣ್ಣಿನ ವೈಭವೀಕರಣವೆ ಎಂದರೆ ಅಲ್ಲವೇ ಅಲ್ಲ. ಅಳುಮುಂಜಿಯರಲ್ಲದ, ಸ್ವಮರುಕವಿಲ್ಲದ, ತನ್ನ ಬದುಕಿನ ಬಗ್ಗೆ ಹೆಚ್ಚೇನೂ ಹಳಹಳಿಕೆಯಿಲ್ಲದೆ, ಇದು ತನ್ನ ಲೋಕ ಎನ್ನುವ ವಾಂಛೆಯಲ್ಲಿ ಬದುಕಿಗೂ ಸಂಸಾರಕ್ಕೂ ಆತುಕೊಂಡ ಇಲ್ಲಿನ ಮಹಿಳೆಯರು ಶಕ್ತಿವಂತರಾಗಿಯೇ ಕಾಣಿಸುತ್ತಾರೆ. ಹಬ್ಬದ ದಿನಗಳಲ್ಲಿ ನೂರಾರು ಮಂದಿಗೆ ಇಡ್ಲಿ, ರೊಟ್ಟಿ ಇನ್ನಿಷ್ಟೋ ತಿಂಡಿಗಳ ತಯಾರಿಯನ್ನು ಎರಡು ಮೂರು ದಿನಗಳಿಂದಲೇ ಮಾಡಿ, ಯಾರಿಗೂ ತೊಂದರೆಯಾಗದಂತೆ ನಿಭಾಯಿಸಿ, ಆಳು ಮಕ್ಕಳೂ ಸೇರಿದಂತೆ ಎಲ್ಲರ ಹೊಟ್ಟೆ ತುಂಬಿಸಿ ಪಡೆಯುವ ಧನ್ಯತೆಯು ಕುಟುಂಬದ ಮರ್ಯಾದೆ ಕಾಪಾಡುವುದಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ, ಅದು ತನ್ನ ಅಸ್ಮಿತೆ, ಆತ್ಮವಿಶ್ವಾಸ, ಸ್ವಗೌರವದ ಪ್ರಶ್ನೆಯೂ ಹೌದು. ಸೋತೆನೆನ್ನದೆ, ಉಸ್ಸೆನ್ನದೆ ಕೆಲಸ ಮಾಡುವ ಈ ಹೆಣ್ಣುಮಕ್ಕಳು ಕರಾರಿಗೆ ಗಂಡಿನ ಜೀತ ಮಾಡುವವರಂತೆ ಕಾಣಿಸದೆ, ತಾನಿಲ್ಲದೆ ನಡೆಯದ ಈ ಮನೆಯನ್ನು ನಾನು ಕಟ್ಟಿ ನಿಲ್ಲಿಸಿದ್ದೇನೆ ಎನ್ನುವ ಧಾರ್ಷ್ಟ್ಯ ಬದುಕು ಸಾಗಿಸುತ್ತಾರೆ.

ಹೆಣ್ಣಿಗೆ ಅಗತ್ಯವಾಗಿ ಬೇಕಾಗಿರುವುದೇ ಈ ಸ್ವಪ್ರೀತಿ, ಸ್ವಗೌರವ. ಲೋಕ ಒಪ್ಪದಿದ್ದರೆ ಏನಂತೆ ಎಂದು ಲೋಕವನ್ನೇ ತುಸು ಕಡೆಗಣ್ಣಿನಲ್ಲಿಯೂ ಇಲ್ಲಿನ ಪಾತ್ರಗಳು ನೋಡುತ್ತವೆ. ಹಾಸನದಲ್ಲಿ ಶಾಲೆಗೆ ಸೇರಿರುವ ಮಣಿಬಾಲೆ ಪಟ್ಟಣವನ್ನೂ ತನ್ನ ಹಳ್ಳಿಯನ್ನೂ ಪಕ್ಕಪಕ್ಕದಲ್ಲಿ ಇಡುವುದೋ ಎದುರು ಬದುರಾಗಿಸುವುದೋ ಎನ್ನುವ ದ್ವಂದ್ವವನ್ನು ಹಲವು ಬಾರಿ ಎದುರಿಸುತ್ತಾಳೆ. ಶಿಕ್ಷಣವು ಹೆಣ್ಣಿನ ಬದುಕಿನಲ್ಲಿ ವಹಿಸಬಹುದಾದ ಪಾತ್ರದ ಬಗ್ಗೆ ಯಾರಿಗೂ ತಕರಾರಿರುವುದು ಸಾಧ್ಯವಿಲ್ಲ. ಅಷ್ಟೇ ಮುಖ್ಯವಾದುದು 'ಸ್ವಶಿಕ್ಷಣ' ಅಲ್ಲವೇ ಎನ್ನುವ ಪ್ರಶ್ನೆಯೊಂದು ನೇಪಥ್ಯದಲ್ಲಿ ಉದ್ದಕ್ಕೂ ಕೇಳಿಸುತ್ತದೆ.